**(ಇಂದು ದಿಃ 27.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಪಾಟೀ ಸವಾಲು ಃ- ಶ್ರೀ ಪಿ.ವಿ.ಎ. ವಕೀಲರಿಂದ ವಾದಿ ಪರ ಃ-

ವಾದಿಯ ಮಗನ ಸಾಲ ತಿರಿಸಲು ನಾನು ನೀಡಿದ ರೂ.2,42,000/-ಗಳನ್ನು ಮರಳಿ ನೀಡಲು ನಾನು ವಾದಿಗೆ ಕೇಳಿದೇನೆ ಎಂಬ ಪ್ರಶ್ನೇಗೆ ಸಾಕ್ಷಿಯು ನಾನು ಕೇಳಿದೇ, ಆದರೆ ವಾದಿ ನೀಡಲಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಹಣವನ್ನು 2003-04ನೇ ಸಾಲಿನಲ್ಲಿ ಕೇಳಿರುತ್ತೇನೆ. ಸದರಿ ಹಣವನ್ನು ಮರಳಿ ನೀಡದೇ ಇರುವುದರಿಂದ ನಾನು ಕಾನೂನು ಕ್ರಮ ವಹಿಸಿದೇ ಎಂಬ ಪ್ರಶ್ನೇಗೆ ಸಾಕ್ಷಿಯು ನನ್ನ ಸಹೋದರನಾಗಿದ್ದರಿಂದ ಕಾನೂನು ಕ್ರಮ ಜರುಗಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಲದ ಹಣವನ್ನು ವಾದಿಯೇ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮರು ಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಹಣ ಮರು ಪಾವತಿ ಮಾಡಿದ್ದಕ್ಕೆ ನಾನು ದಾಖಲೆ ಹಾಜರು ಮಾಡಿಲ್ಲ ಎಂದರೆ, ಸಾಕ್ಷಿಯು ಸದರಿ ಸಂಸ್ಥೆ ಫೈನಾನ್ಸ್ ಆಗಿದ್ದು ಪಾವತಿ ನೀಡಿಲ್ಲ ಎಂದು ನುಡಿಯುತ್ತಾರೆ.

ನಮ್ಮ ತಂದೆ-ತಾಯಿಗೆ 5 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. 1973 ಗಿಂತ ಮುಂಚೆ ನಾವು ನಮ್ಮ ತಂದೆ-ತಾಯಿಯೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದೇವು ಎಂದರೆ ಸರಿ. ನಮ್ಮ ತಂದೆಯು ಉಪ ಖಜಾನೆಯಲ್ಲಿ ದ್ವಿ.ದ.ಸಹಾಯಕರು ಆಗಿದ್ದು ಅವರಿಗೆ ಹಿರಿಯರಿಂದ ಬಂದ ಯಾವುದೇ ಜಮೀನು ಮತ್ತು ಮನೆ ಇರಲಿಲ್ಲ ಎಂದರೆ ಸರಿ. ನಮ್ಮ ತಂದೆಗೆ ಅವರ ಸಂಭಳವನ್ನು ಹೊರತುಪಡಿಸಿ ಬೇರೆ ಆಧಾಯ ಇರಲಿಲ್ಲ ಎಂದರೆ ಸರಿ. ವಾದಿಯು ನನ್ನ ಹಿರಿಯ ಅಣ್ಣ ಎಂದರೆ ಸರಿ. 2ನೇ ಅಣ್ಣನ ಹೆಸರು ಅಶೋಕ ತದನಂತರ ನಾನು ಎಂದರೆ ಸರಿ. ಮುಕುಂದ ರವರು ನನಗಿಂತ ಚಿಕ್ಕವರು ಮತ್ತು ಅವರ ನಂತರ ಮೋಹನ್ ಇರುತ್ತಾರೆ. ಸದರಿ ಮೋಹನ್ ಮೃತಪಟ್ಟಿದ್ದಾರೆ ಎಂದರೆ ಸರಿ. ಉಳಿದ ಸಹೋದರ ಮತ್ತು ಸಹೋದರಿಯರು ಇದ್ದಾರೆ ಎಂದರೆ ಸರಿ. ವಾದಿಗೆ 1965ರಲ್ಲಿ ಕೆ.ಇ.ಬಿ.ಯಲ್ಲಿ ನೌಕರಿ ದೊರೆಯಿತು ಎಂದರೆ ಸರಿ. ದಾವಾ ಮನೆಯ ನಿವೇಶನವನ್ನು ವಾದಿಯು ತನ್ನ ಸಂಭಳದಲ್ಲಿ ಉಳಿತಾಯ ಮಾಡಿ 1973ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮ್ಮ ತಂದೆ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುನ್ನು ನಮ್ಮ ತಂದೆ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ 1984ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ದಾವಾ ನಿವೇಶನಕ್ಕೆ ಸಂಬಂಧಿಸಿದ ಖಾತೆಯು ವಾದಿಯ ಹೆಸರಿಗೆ ಆದ ನಂತರ ವಾದಿಯು ಪುರಸಭೆಯಿಂದ ಅನುಮತಿ ಪಡೆದು, ತನ್ನಇಲಾಖೆಯಿಂದ ಸಾಲ ಪಡೆದು ದಾವಾ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಮನೆಯನ್ನು ವಾದಿಯು ಕೆ.ಇ.ಬಿ. ಇಲಾಖೆಗೆ ಅಡಮಾನ ಮಾಡಿದ್ದಾರೆ ಎಂದರೆ ನನಗೆ ಮಾಹಿತಿ

ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಾಲದ ಕಂತನ್ನು ವಾದಿಯ ಸಂಭಳದಿಂದ ಪ್ರತಿ ಮಾಹೆ ಕಡಿತಗೊಂಡಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಲ ಮರು ಪಾವತಿಯಾದ 2000ನೇ ಸಾಲಿನಲ್ಲಿ ಕೆ.ಇ.ಬಿ. ಇಲಾಖೆಯು ಸದರಿ ಅಡಮಾನವನ್ನು ವಿಮೋಚನೆ ಮಾಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ದಾವಾ ಮನೆಯನ್ನು ನಮ್ಮ ತಂದೆ ಮತ್ತು ಅಶೋಕ ರವರು ನೀಡಿದ ಹಣದಿಂದ ಕಟ್ಟಲಾಗಿದೆ. ದಾವಾ ಮನೆಯು ವಾದಿಯೇ ಕಟ್ಟಿದ್ದರೂ ಸಹ ನಮ್ಮ ತಂದೆ ಮತ್ತು ಅಶೋಕ ರವರು ನೀಡಿದ ಹಣದಿಂದ ಕಟ್ಟಲಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯು ತನ್ನ ಹೆಸರಿನಲ್ಲಿ ಇಂದಿಗೂ ಸಹ ಮನೆ ಹೊಂದಿರುವುದಿಲ್ಲ ಎಂದರೆ ಸರಿ. ನಾನು ಆಳಂದ ನಗರದ ಮುಖ್ಯ ರಸ್ತೆಗೆ ಹೊಂದಿಕೊಂಡು ಇರುವ ಶ್ರೀಪಾದರಾವ್ ದೇಶಪಾಂಡೆ ರವರಿಂದ ನಿವೇಶನವನ್ನು ಖರೀದಿಸಿ 2 ಅಂತಸ್ತು ಮನೆಯನ್ನು ಕಟ್ಟಿದ್ದೇನೆ ಎಂದರೆ ಸರಿ. ಸದರಿ ಕಟ್ಟಡವನ್ನು ರೂ.26,00,000/-ಗಳಿಗೆ ನಾಗರಾಜ ಕಂಠೆ ಎಂಬುವವರಿಗೆ ಮಾರಾಟ ಮಾಡಿದ್ದೇನೆ. ಸದರಿ ಆಸ್ತಿ ಹೊರತುಪಡಿಸಿ ನನ್ನ ಬೇರೆ ಆಸ್ತಿ ಇರುವುದಿಲ್ಲ. ಕಲಬುರಗಿ ನಗರದಲ್ಲಿ ನನ್ನ ಹೆಸರಿಗೆ ಯಾವುದೇ ಆಸ್ತಿ ಇರುವುದಿಲ್ಲ. ಮೊದಲು ಕಲಬುರಗಿಯಲ್ಲಿ ನನ್ನ ಹೆಸರಿಗೆ ನ್ಯೂ ರಾಘವೇಂದ್ರ ಕಾಲೋನಿಯಲ್ಲಿ ನಿವೇಶನ ಇತ್ತು ಅದನ್ನು ನಾನು ಮುಕುಂದ ರವರಿಗೆ ಮಾರಾಟ ಮಾಡಿದ್ದೇನೆ. ಸದರಿ ನಿವೇಶನವನ್ನು 2002ನೇ ಸಾಲಿನಲ್ಲಿ ರೂ.1,00,000/-ಗಳಿಗೆ ಮಾರಾಟ ಮಾಡಿರುತ್ತೇನೆ. ನನ್ನ ಇನ್ನೊಬ್ಬ ಸಹೋದರನಾದ ಅಶೋಕ ರವರಿಗೆ ಕಲಬುರಗಿಯಲ್ಲಿ ಮನೆ ಇದೆ ಎಂದರೆ ಸರಿ. ಅದೇ ರೀತಿ ಇನ್ನೊಬ್ಬ ಸಹೋದರನಾದ ಮುಕುಂದ ರವರಿಗೆ ಮನೆ ಇದೆ ಎಂದರೆ ಸರಿ. ನಾನು ಆಳಂದ ನಗರದಲ್ಲಿರುವ ಕಟ್ಟಡವನ್ನು ಮಾರಾಟ ಮಾಡಿ ಬೆಂಗಳೂರು ನಗರದಲ್ಲಿ ಮನೆ ಖರಿದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಮನೆಯನ್ನು ನನ್ನ ಮಗ ತನ್ನ ಸಂಭಳದಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಈ ಸಮಯದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.